**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>**

**<u>Spl.C.1/2022</u>**

| | | |
|---|---|---|
| ಸಾಕ್ಷಿದಾರರ ಹೆಸರು | : | ವಿರೇಶ ಎಂ. ಎಲ್. |
| ತಂದೆಯ ಹೆಸರು | : | ಎ. ಬಿ. ಲಿಂಗಯ್ಯ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಬಿಲ್ ಕಲೆಕ್ಟರ್, ಗ್ರಾಮ ಪಂಚಾಯಿತಿ, ದೇವಿಕೆರೆ |
| ವಾಸ ಸ್ಥಳ | : | ದೇವಿಕೆರೆ, ಜಗಳೂರು ತಾಲ್ಲೂಕು |

ಪಿ.ಡಬ್ಲ್ಯೂ 2

ಸಿ.ಡಬ್ಲ್ಯೂ 3

ದಿ: 22-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಸತೀಶ್ ಕೆ.ಎಸ್.)</u>**:

1. ನಾನು 16 ವರ್ಷಗಳಿಂದ ದೇವಿಕೆರೆಯಲ್ಲಿ ಬಿಲ್ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದೇನೆ. ನನಗೆ ಚಾಸಾ-2 ರವರ ಪರಿಚಯ ಇದೆ. ಅವರು ನಮ್ಮ ಸಹದ್ಯೋಗಿ. ದಿಃ 30-01-2021 ರಂದು ಬಿಳಿಚೋಡು ಪೊಲೀಸ್ ಠಾಣೆಯ ಪೊಲೀಸರು ಪಿ.ಡಿ.ಓ. ರವರಿಗೆ ಕರೆ ಮಾಡಿದ್ದರು. ಆಗ ನಮಗೆ ಪಂಚರಾಗಿ ಹೋಗಲು ಪರವಾನಗಿ ನೀಡಿದರು. ಅದರಂತೆ ನಾನು ಮತ್ತು ಚಾಸಾ-2 ರವರು ಮಧ್ಯಾಹ್ನ 3.30 ಗಂಟೆಗೆ ಬಿಳಿಚೋಡು ಪೊಲೀಸ್ ಠಾಣೆಗೆ ಹೋದೆವು. ಮೆದಿಕೆರೆನಹಳ್ಳಿ ಗ್ರಾಮದ ಅಜ್ಜಬೊಮ್ಮನಹಳ್ಳಿಯಲ್ಲಿ ಗಾಂಜಾ ಬೆಳೆದ ಮಾಹಿತಿ ಬಂದಿದ್ದು, ಪಂಚರಾಗಿ ಸಹಕರಿಸಲು ನಮಗೆ ನೋಟಿಸ್ಸು ನೀಡಿದರು. ಆ ನೋಟಿಸ್ಸನ್ನು ಈಗ ನೋಡಿ ಅದರಲ್ಲಿರುವ ನನ್ನ ಸಹಿ ಗುರುತಿಸುತ್ತೇನೆ.

ನೋಟಿಸ್ಸನ್ನು ಈಗಾಗಲೇ ನಿಪಿ-1 ಅಂತ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಅಂತ ಗುರುತಿಸಲಾಯಿತು.

2. ಚಾಸಾ-1 ರವರು ನನ್ನನ್ನು, ಚಾಸಾ-2 ರವರನ್ನು ಮತ್ತು ಪೊಲೀಸ್ ಸಿಬ್ಬಂದಿಯನ್ನು ಕರೆದುಕೊಂಡು ಸದರಿ ಗ್ರಾಮಕ್ಕೆ ಹೋದೆವು. ತನಿಖೆಗೆ ಬೇಕಾದ ವಸ್ತುಗಳನ್ನು ಸಹ ತೆಗೆದುಕೊಂಡು ಹೋಗಿದ್ದೆವು. ಮೊದಲಿಗೆ ಅಲ್ಲಿ ಹೊಲದ ಪಕ್ಕದಲ್ಲಿದ್ದ ಮನೆಗೆ ಹೋಗಿ ನೋಡಿದಾಗ ಅಲ್ಲಿ ಆರೋಪಿತರು ಇದ್ದರು. ಪೊಲೀಸರು ಆರೋಪಿಗೆ ಗಾಂಜಾ ಮಾರಾಟ ಮಾಡುವ ಬಗ್ಗೆ ಪರಿಶೀಲನೆ ಮಾಡಲು ಮಾಹಿತಿ ಬಂದಿರುತ್ತದೆ ಅಂತ ತಿಳಿಸಿದರು. ಆದ್ದರಿಂದ ಶೋಧನೆ ಮಾಡಲು ಸಹಕರಿಸಲು ಕೋರಿದರು. ಅದಕ್ಕೆ ಆರೋಪಿತರು ಒಪ್ಪಿದರು. ನಂತರ ನಾವು ಪರಸ್ಪರ ಅಂಗ ಶೋಧನೆ ಮಾಡಿಕೊಂಡು ನಮ್ಮಲ್ಲಿ ಯಾವುದೇ ಅಂತಹ ವಸ್ತುಗಳು ಇಲ್ಲ ಅಂತ ಖಚಿತಪಡಿಸಿಕೊಂಡೆವು. ಒಳಗಡೆ ಒಂದು ದನದ ಕೊಟ್ಟಿಗೆ ಇತ್ತು, ಅಲ್ಲಿ ಮೇವು ಹಾಕುವ ಜಾಗ ಇತ್ತು, ಆ ಕಡೆ ಒಂದು ಮಂಚ ಇತ್ತು, ಗೋಡೆಯ ಹತ್ತಿರ 05 ಅಡಿ ಎತ್ತರದ ಒಂದು ಹಲಿಗೆ ಇತ್ತು, ಆ ಹಲಿಗೆಯ ಮೇಲೆ ಒಂದು ರಟ್ಟಿನ ಬಾಕ್ಸ ಇದ್ದು, ಅದರ ಒಳಗಡೆ ನೀಲಿ ಕವರ್ ನಲ್ಲಿ ಒಣಗಿದ ಗಾಂಜಾ ಇತ್ತು. ಅದನ್ನು ಪರಿಶೀಲನೆ ಮಾಡಿದಾಗ ಅದು ಗಾಟು ವಾಸನೆ ಬರುತ್ತಿತ್ತು ಆದ್ದರಿಂದ ಅದು ಗಾಂಜಾ ಅಂತ ಖಚಿತಪಡಿಸಿಕೊಂಡೆವು. ಈ ಬಗ್ಗೆ ಆರೋಪಿತರ ಬಳಿ ವಿಚಾರಿಸಿದಾಗ ಇದನ್ನು ಮಾರಾಟ ಮಾಡಲು ಇಟ್ಟಿರುವುದಾಗಿ ಹೇಳಿದರು. ಇದನ್ನು ಎಲ್ಲಿಂದ ತಂದಿದ್ದೀರಾ ಅಂತ ವಿಚಾರಿಸಿದಾಗ ನಮ್ಮ ಹೊಲದ ಬದನೆ ಬೆಳೆಯಲ್ಲಿ ಗಾಂಜಾ ಬೆಳೆದಿರುವುದಾಗಿ ತಿಳಿಸಿದರು. ಸದರಿ ಕವರ್ ನಲ್ಲಿ ಇದ್ದ ಗಾಂಜಾವನ್ನು ತೂಕ ಮಾಡಿದಾಗ ಅದು 380 ಗ್ರಾಂ. ತೂಕ ಇತ್ತು. ಅದರ ಪೈಕಿ 100 ಗ್ರಾಂ. ಗಾಂಜಾವನ್ನು ಮಾದರಿಗಾಗಿ ತೆಗೆಯಲಾಯಿತು. ಉಳಿದ ಗಾಂಜಾವನ್ನು ಪ್ಯಾಕ್ ಮಾಡಿ ಸೀಲ್ ಮಾಡಲಾಯಿತು. ನಂತರ ಆರೋಪಿತರು ನಮ್ಮನ್ನು ತನ್ನ ಜಮೀನಿನ ಬಳಿ ಕರೆದುಕೊಂಡು ಹೋಗಿ ಬದನೆ ಗಿಡದ ಬೆಳೆಯ ಮಧ್ಯೆದಲ್ಲಿ ಬೆಳೆದಿರುವುದಾಗಿ ತೋರಿಸಿದ.

3. ಸದರಿ ಹೊಲದ ಪಕ್ಕದಲ್ಲಿದ್ದ ಬಸವರಾಜಪ್ಪ ಎಂಬುವವರನ್ನು ಕರೆಸಿದರು. ಅವರು ಬಂದು ಪರಿಶೀಲನೆ ಮಾಡಿದಾಗ ಅಲ್ಲಿ ಹಸಿ ಗಾಂಜಾ ಗಿಡಗಳು ಇದ್ದವು. ಅಲ್ಲಿ ಮೊದಲು 45 ಇಂಚಿನ 08 ಗಾಂಜಾ ಗಿಡಗಳು ಕಂಡು ಬಂದವು. ನಂತರ 30 ಇಂಚಿನ 24 ಗಾಂಜಾ ಗಿಡಗಳು ಕಂಡು ಬಂದವು. ಅವುಗಳನ್ನು ತೂಕ ಮಾಡಿ ನೋಡಲಾಗಿ ಅದರಲ್ಲಿ ಒಟ್ಟು 650 ಗ್ರಾಂ. ಹಸಿ ಸೊಪ್ಪಿನ ಗಾಂಜಾ ಗಿಡ ಇತ್ತು. ಅದರಲ್ಲಿ 125 ಗ್ರಾಂ. ಗಾಂಜಾವನ್ನು ಮಾದರಿಗಾಗಿ ತೆಗೆದು ಪ್ಯಾಕ್ ಮಾಡಿ ಸೀಲ್ ಮಾಡಲಾಯಿತು. ಸ್ಥಳದಲ್ಲಿ ಪಂಚನಾಮೆ ಮಾಡಿ ನನ್ನ ಸಹಿ ಪಡೆದುಕೊಂಡರು. ನಿಪಿ-2 ರಲ್ಲಿ ನನ್ನ ಸಹಿಯನ್ನು ನೋಡಿ ಗುರುತಿಸುತ್ತೇನೆ. ನಿಪಿ-2 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಅಂತ ಗುರುತಿಸಲಾಯಿತು. ಸ್ಥಳದಲ್ಲಿ ನಿಪಿ-3 ರಂತೆ ಕಚ್ಚಾ ನಕಾಶೆಯನ್ನು ತಯಾರಿಸಲಾಯಿತು. ನಿಪಿ-3 ರಲ್ಲಿ ನನ್ನ ಸಹಿಯನ್ನು ನೋಡಿ ಗುರುತಿಸುತ್ತೇನೆ. ನಿಪಿ-3 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಅಂತ ಗುರುತಿಸಲಾಯಿತು. ಪಂಚನಾಮೆಯ ಕಾಲಕ್ಕೆ ನಿಪಿ-4 ರಿಂದ 21 ಅಂತ ಗುರುತಿಸಲಾಗಿದೆ. ಮು.ಮಾ.1 ಮತ್ತು 2 ನ್ನು ಈಗ ನೋಡಿ ಗುರುತಿಸುತ್ತೇನೆ. ಆ ಸ್ಥಳದಲ್ಲಿದ್ದಂತಹ ಆರೋಪಿ ಅಂದರೆ ಈ ದಿನ ನ್ಯಾಯಾಲಯದಲ್ಲಿರುವ ಆರೋಪಿ ಇರುತ್ತಾರೆ. ಸಾಕ್ಷಿದಾರರು ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಶ್ರೀ ಎನ್.ಬಿ.ಪಿ., ವಕೀಲರಿಂದ ಆರೋಪಿತರ ಪರವಾಗಿ**:

4. ನಮ್ಮ ಗ್ರಾಮ ಪಂಚಾಯಿತಿ ಪಿ.ಡಿ.ಓ. ರವರು ನಮಗೆ ಪಂಚರಾಗಿ ಸಹಕರಿಸಲು ಹೇಳಿದರು. ಅವರು ನಮಗೆ ಆ ವಿಷಯ ಹೇಳಿದಾಗ ಮಧ್ಯಾಹ್ನ 2.50 ಗಂಟೆ ಆಗಿತ್ತು. ಈ ವಿಷಯವನ್ನು ನಮಗೆ ಫೋನ್ ಮುಖಾಂತರ ಹೇಳಿದರು. ನಾವು ಪಿ.ಡಿ.ಓ. ರವರಿಗೆ ಅರ್ಜಿಯನ್ನು ಬರೆದುಕೊಟ್ಟಿಲ್ಲ. ಈ ವಿಷಯವನ್ನು ನಾನು ತಾಲ್ಲೂಕು ಕಾರ್ಯನಿರ್ವಾಹಕರಿಗೆ ತಿಳಿಸಿಲ್ಲ. ಬಿಳಿಚೋಡು ಪೊಲೀಸ್ ಠಾಣೆಗೆ ನಾನುಹೋದಾಗ ಮಧ್ಯಾಹ್ನ 3.30 ಗಂಟೆ ಆಗಿತ್ತು. ಆಗ ಚಾಸಾ-2 ರವರು ಅಲ್ಲಿಗೆ ಬಂದಿದ್ದರು. ನೋಟಿಸ್ಸನ್ನು ನಮಗೆ ಬರವಣಿಗೆ ಮುಖಾಂತರ ಕೇಳಿದರು. ಆ ನೋಟಿಸ್ಸಿಗೆ ನಾವು ಸಹಿ ಮಾಡಿದ್ದೇವೆ.

ನೋಟಿಸ್ಸನ್ನು ತೆಗೆದುಕೊಂಡಾಗ 3.40 ಗಂಟೆ ಆಗಿತ್ತು. ಚಾಸಾ-2 ರವರಿಗೆ ಎಷ್ಟು ಗಂಟೆಗೆ ನೋಟಿಸ್ಸು ಕೊಟ್ಟರು ಅಂತ ನನಗೆ ಹೇಳಲು ಬರುವುದಿಲ್ಲ. ಬಿಳಿಚೋಡು ಪೊಲೀಸ್ ಠಾಣೆಯಿಂದ ಮೆದಿಕೆರೆನಹಳ್ಳಿ 07 ಕಿ.ಮೀ. ಅಂತರ ಇರುತ್ತದೆ. ಮೆದಿಕೆರೆನಹಳ್ಳಿ ರಸ್ತೆಗೆ ಹೊಂದಿಕೊಂಡು ಆರೋಪಿಯ ಜಮೀನು ಇರುತ್ತದೆ. ನಾನು ರಸ್ತೆಗೆ ಹೊಂದಿಕೊಂಡು 100 ಮೀ. ದೂರದಲ್ಲಿ ಇದ್ದೆ. ದನದ ಕೊಟ್ಟಿಗೆಯ ವಿಸ್ತೀರ್ಣ 13 ಅಡಿ ಉತ್ತರ ದಕ್ಷಿಣ 18 ಅಡಿ ಪೂರ್ಣ ಪಶ್ಚಿಮ ಇದೆ. ಅದುಪೂರ್ವ ದಿಕ್ಕಿಗೆ ಇರುತ್ತದೆ.

5. ಆರೋಪಿಯ ಜಮೀನು ಸಂಪೂರ್ಣವಾಗಿ ನೀರಾವರಿ ಇರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಆರೋಪಿಯ ಜಮೀನಿನ ಪಶ್ಚಿಮ ದಿಕ್ಕಿಗೆ ರಾಮಪ್ಪರವರ ಜಮೀನು, ಉತ್ತರ ದಿಕ್ಕಿಗೆ ನೀರಾವರಿ ಜಮೀನು ಇರುತ್ತದೆ ಅಂದರೆ ನಿಜ. ಆರೋಪಿಯ ಜಮೀನಿನ ದಕ್ಷಿಣ ದಿಕ್ಕಿನಲ್ಲಿರುವ ಜಮೀನುಗಳು ನೀರಾವರಿ ಜಮೀನುಗಳು ಅಂದರೆ ನನಗೆ ಗೊತ್ತಿಲ್ಲ. ಆರೋಪಿಯ ಜಮೀನಿನ ಪೂರ್ವ ದಿಕ್ಕಿಗೆ ರಸ್ತೆಗೆ ಹೊಂದಿಕೊಂಡು ನೀರಾವರಿ ಜಮೀನು ಇರುತ್ತದೆ ಅಂದರೆ ನಿಜ. ಆರೋಪಿಯ ಜಮೀನಿನ ಎಲ್ಲಾ ದಿಕ್ಕಿಗಳಲ್ಲಿರುವ ಬದುವಿನಲ್ಲಿ ಮರಗಳು ಇವೆ ಅಂದರೆ ನಿಜ. ಅಲ್ಲಿ ಪಕ್ಷಿ ಪ್ರಾಣಿಗಳು ಓಡಾಡುತ್ತಿರುತ್ತವೆ ಎಂದರೆ ನಿಜ. ಆರೋಪಿಯ ಜಮೀನು ನೀರಾವರಿ ಜಮೀನು ಅಂದರೆ ನಿಜ. ಅದು ಎಷ್ಟು ಎಕರೆ ಇದೆ ಎಂದು ನನಗೆ ಗೊತ್ತಿಲ್ಲ. ಒಣ ಗಾಂಜ ಆರೋಪಿಯ ಮನೆಯ ಯಾವ ದಿಕ್ಕಿನಲ್ಲಿ ಇತ್ತು ಅಂತ ಹೇಳಲು ಬರುವುದಿಲ್ಲ.

6. ಒಣ ಗಾಂಜದಲ್ಲಿ ಇದ್ದಂತಹ ಹೂ ಕಾಯಿ ಬೇರೆ ಮಾಡಿದ್ದರಾ ಎಂದರೆ ಮಾಡಿಲ್ಲ. ಯಾವ ದಿಕ್ಕಿಯಲ್ಲಿ ಸಾಲುಗಳು ಪೂರ್ವ ಪಶ್ಚಿಮ ಅಥವಾ ಉತ್ತರ ದಿಕ್ಕಿನ ಸಾಗುವಳಿ ಹೊಡೆದಿದ್ದರು ಹೇಳಲು ಬರುವುದಿಲ್ಲ. ಯಾವ ಯಾವ ಸಾಲಿನಲ್ಲಿ ಎಷ್ಟು ಗಾಂಜಾ ಗಿಡಗಳು ಇದ್ದವು ಹೇಳಲು ಬರುವುದಿಲ್ಲ. ಆ ಹೊಲದಲ್ಲಿ ಗಾಂಜಾದ ಹೂ ಮತ್ತು ಕಾಯಿ ಬೇರ್ಪಡಿಸಿರುವುದಿಲ್ಲ. ಮಹಜರನ್ನು ಸಂಜೆ 4-00 ಗಂಟೆಯಿಂದ 5-45 ರ ವರಗೆ ಮಾಡಿದರು. ನಾನು ಆ ದಿನ ಸ್ಥಳಕ್ಕೆ ಹೋಗಿರಲಿಲ್ಲ ಮತ್ತು ಅಲ್ಲಿ

ಮಹಜರು ಮಾಡಿರಲಿಲ್ಲ ಅಂದರೆ ಸುಳ್ಳು. ನಾನು ಪಂಚನಾಮೆಗೆ ನಾನು ಠಾಣೆಯಲ್ಲಿಯೇ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಪೋಟೋ ತೆಗೆದಿರುವುದು, ಗಾಂಜವನ್ನು ವಶಪಡಿಸಿದ್ದು ಸುಳ್ಳು ಎಂದರೆ ಸರಿಯಲ್ಲ. ಪೋಲೀಸರ ಮಾತನ್ನು ಕೇಳಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.